CW.3 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.17/2016

| | |
|---|---|
| ಸಾಕ್ಷಿದಾರರ ಹೆಸರು | ನಯನ |
| ಗಂಡನ ಹೆಸರು | ಶಿವಾನಂದ್ |
| ವಯಸ್ಸು | 30 ವರ್ಷ |
| ವೃತ್ತಿ | ಗೃಹಿಣಿ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 07.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ಗುರುತಿಸಲು ಈಗ ನನಗೆ ಅಷ್ಟಾಗಿ ನೆನಪಿಲ್ಲ. ಚಾಸಾ-1, ಚಾಸಾ-2 ಮತ್ತು ಚಾಸಾ-4 ರವರ ಪರಿಚಯವಿದೆ.

ದಿನಾಂಕ 16.05.2014 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ನಾವು 4 ಜನ ಅಂದರೆ ನಾನು, ನನ್ನ ತಂದೆ ತಾಯಿ ಹಾಗೂ ತಂಗಿ ಆಟೋವಿನಲ್ಲಿ ತಗ್ಗಟ್ಟಿ ಎಂಬ ಊರಿಗೆ ಹೋಗುತ್ತಿದ್ದೇವು. ಕೆಎ-05-ಎಸಿ-2285 ಸದರಿ ಆಟೋವಿನ ಸಂಖ್ಯೆ. ಸದರಿ ಆಟೋ ನಮ್ಮದೇ ಆಗಿದ್ದು ನನ್ನ ತಂದೆಯಾದ ಚಾಸಾ-1 ರವರು ಅದನ್ನು ಚಾಲನೆ ಮಾಡುತ್ತಿದ್ದರು. ಭೀಮಗೊಂಡನಹಳ್ಳಿ ಯ ಬಳಿ ಒಂದು ಕೆರೆ ಇದ್ದು ಅಲ್ಲಿ ರಸ್ತೆಯ ಬಳಿ ಕ್ರಾಸ್ ಮಾಡುವಾಗ ಕೆ ಎಸ್ ಆರ್ ಟಿ ಸಿ ಬಸ್‌ವೊಂದು ಹುಣಸನಹಳ್ಳಿ ಕಡೆಯಿಂದ ಬರುತ್ತಿತ್ತು ಅದು ಅತಿವೇಗವಾಗಿ ಬಂದು ಆಟೋವಿಗೆ ಅಪಘಾತ ಪಡಿಸಿರುತ್ತದೆ. ನಮ್ಮ ಆಟೋ ಮೂರು ಪಲ್ಟಿ ಹೊಡೆದು ಬಿದ್ದಿದ್ದು ನಮ್ಮೆಲ್ಲರಿಗೂ ಗಾಯಗಳಾಗಿರುತ್ತವೆ.

ನನ್ನ ತಂಗಿಯಾದ ಚಾಸಾ-4 ರವರಿಗೆ ಕಾಲು ಫ್ರಾಕ್ಚರ್ ಆಗಿರುತ್ತದೆ. ಅಲ್ಲಿನ ಊರಿನವರು ಹೊಸದುರ್ಗ ಗ್ರಾಮದಲ್ಲಿರುವ ಗ್ರಾಮಕ್ಕೆ ನಮ್ಮನ್ನು ಸೇರಿಸಿದರು. ನಂತರ ಅವರು ಹೆಚ್ಚಿ ನ ಚಿಕಿತ್ಸೆಗೆಂದು ಕನಕಪುರ ಸರ್ಕಾರಿ ಆಸ್ಪತ್ರೆ ಕಳುಹಿಸಿರುತ್ತಾರೆ. ಅಲ್ಲಿಂದ ಹೆಚ್ಚಿ ನ ಚಿಕಿತ್ಸೆಗೆಂದು ಸಂಜಯ್ ಗಾಂಧಿ ಆಸ್ಪತ್ರೆಗೆ ನಮ್ಮನ್ನು ಕಳುಹಿಸಿರುತ್ತಾರೆ. ಅಲ್ಲೂ ಕೂಡ ಸೌಲಭ್ಯವಿಲ್ಲ ಎಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ಏನೂ ಸ್ಟ್ರೇಕ್ ಆಗುತ್ತಿದ್ದ ಕಾರಣ ಚಿಕಿತ್ಸೆ ಕೊಡಲು ಆಗುವುದಿಲ್ಲ ಎಂದು ನಮ್ಮನ್ನು ದಿ ಫಲ್ಸ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಅಲ್ಲಿ ಚಾಸಾ-4 ಈಕೆಗೆ ಕಾಲಿನ ಸಂಬಂಧ ಅಪರೇಷನ್ ಆಗಿರುತ್ತದೆ. ನಮಗೆಲ್ಲಾ ಗಾಯಗಳಿಗೆ ಚಿಕಿತ್ಸೆ ಕೊಟ್ಟಿರುತ್ತಾರೆ. 5 ದಿನಗಳ ಕಾಲ ಆಸ್ಪತ್ರೆಯಲ್ಲಿದ್ದು ನಂತರ ಡಿಸ್ ಚಾಚರ್ ಮಾಡಿರುತ್ತಾರೆ. ಚಾಸಾ-4 ಈಕೆಗೆ 18 ವರ್ಷ ತುಂಬಿದ ಮೇಲೆ ಮತ್ತೆ ಅಪರೇಷನ್ ಮಾಡಬೇಕೆಂದು ಹೇಳಿರುತ್ತಾರೆ.

ಅಪಘಾತ ಪಡಿಸಿದ ಬಸ್ ಸಂಖ್ಯೆ ಕೆಎ-40-ಎಫ್-094 ಆಗಿರುತ್ತದೆ. ನಾನು ಈ ಸಂಬಂಧ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಪ್ರಸ್ತುತ ಗೃಹಿಣಿಯಾಗಿರುತ್ತೇನೆ. ನಾನು ಸದರಿ ದಿನ ಬೆಂಗಳೂರಿನಿಂದ ನನ್ನ ಅಕ್ಕನ ಊರಿಗೆ ಹೋಗುತ್ತಿದ್ದೇನು. ಬೆಂಗಳೂರಿನಿಂದ ತಮಿಳುನಾಡುವಿನ ತಗ್ಗಟ್ಟಿಗೆ ಹೋಗಲು ಸುಮಾರು 5 ರಿಂದ 6 ಗಂಟೆಗಳ ಕಾಲಾವಕಾಶ ಬೇಕು ಎಂದರೆ ಸರಿ. ನಮ್ಮ ಆಟೋ ಬಹಳ ಹಳೆಯದಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ಆಟೋ ಚಾಲಾಯಿಸಲು ಸರಿಯಾಗಿ ಬರುವುದಿಲ್ಲ ಎಂದರೆ ಸಾಕ್ಷಿಯು ಅವರು 30 ವರ್ಷಗಳಿಂದ ಆಟೋ ಚಾಲನೆ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ಸದರಿ ಆಟೋ ಚಲಾಯಿಸಲು ಕೇವಲ ಬೆಂಗಳೂರಿನ ಪರಿಷ್ಕಾಪ್ತಿ ಇತ್ತು ಎಂದರೆ ಆ ರೀತಿ ಏನು ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆಟೋವಿನಲ್ಲಿ ಅಷ್ಟು ದೂರ ಪ್ರಯಾಣಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸ್ಥಳದ ರಸ್ತೆ ಸರಿಯಾಗಿ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಾಗಿ ಇತ್ತು ಆದರೆ ಅವರು ಸ್ಪೀಡ್ ಕಂಟ್ರೋಲ್

ಮಾಡಲಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ರಸ್ತೆ ಕಿರಿದಾಗಿತ್ತು ಎಂದರೆ ಸರಿಯಲ್ಲ. ಅಪಘಾತದ ಸ್ಥಳದ ರಸ್ತೆಯು ತಿರುವಿನಲ್ಲಿ ಬರುತ್ತದೆಂದರೆ ಸಾಕ್ಷಿಯು ಒಬ್ಬರ ಗಾಡಿ ಇನ್ನೊಬ್ಬರಿಗೆ ಕಾಣುತ್ತದೆಂದು ನುಡಿಯುತ್ತಾರೆ. ಸದರಿ ದಿನ ನಾವು ಅಲ್ಲಿ ಪ್ರಯಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಈ ಸಂಬಂಧ ನಮ್ಮ ಕುಟುಂಬದವರು ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ಪೋಲೀಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಪೋಲೀಸರು ಠಾಣೆಯಲ್ಲೇ ತಯಾರುಮಾಡಿ ನಮ್ಮ ಮನೆಗೆ ತಂದು ಸಹಿ ಪಡೆದಿರುತ್ತಾರೆಂದರೆ ಸರಿಯಲ್ಲ. ಕೇವಲ ಪರಿಹಾರದ ಮೊತ್ತವನ್ನು ಪಡೆಯುವ ಉದ್ದೇಶದಿಂದ ಪ್ರಸ್ತುತ ಪ್ರಕರಣದಲ್ಲಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**